ಸಂಪರ್ಕ ಸಾಧ್ಯವಾಯಿತು. 'ಇಷ್ಟು ಸಮಯ, ಇಷ್ಟೊಂದು ವರ್ಷಗಳು ಸೈಕಲ್ ಮೇಲೆ ಹೊರ ದೇಶಗಳಲ್ಲಿ ಅಲೆದಾಡಲು ನಿಮ್ಮ ಮನೆಯವರಿಂದ ಅನುಮತಿ ಹೇಗೆ ಸಿಕ್ಕಿತು?' ಎಂದು ಭಾವೇಶ್ ಕುತೂಹಲದಿಂದ ಕೇಳಿದರು. ಅವರು ಹೇಳಿದರು: 'ನಾವು 2627ರ ವಯಸ್ಸಿನವರು. ಈ ವಯಸ್ಸಿನಲ್ಲಿ ಮನೆಯವರ ಅನುಮತಿ ತೆಗೆದುಕೊಳ್ಳುವ ಅಗತ್ಯವೆಲ್ಲಿದೆ?' ಅವರ ಉತ್ತರ ಭಾವೇಶ್ ಅವರನ್ನು ಅಚ್ಚರಿಗೊಳಿಸಿತ್ತು. ಇಲ್ಲಿ ಭಾರತದಲ್ಲಿ ನಮಗೆ ಎಷ್ಟೇ ವಯಸ್ಸಾಗಿರಲಿ, ನಮ್ಮ ಹಿರಿಯರಿಂದ ಅನುಮತಿ ಪಡೆಯದೆ ಯಾವ ಕೆಲಸವನ್ನೂ ಮಾಡುವುದಿಲ್ಲ. ಈ ಬಗೆಯಲ್ಲಿ ಹಿತವಿತ್ತು. ಆದರೆ ಬಹಳಷ್ಟು ಬಾರಿ ತಮ್ಮ ಕನಸುಗಳ ಬೆನ್ನತ್ತಿ ಹೋಗಲಾರದ ಅಡ್ಡಿಯೂ ಇರುತ್ತಿತ್ತು. ಇಲ್ಲಿ ಈ ಯೂರೋಪಿನ ಗೆಳೆಯರಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಸಾವಿರಾರು ಕಿಲೋಮೀಟರ್ ಯಾರ ಹಂಗಿಲ್ಲದೆ, ನಿರಾತಂಕವಾಗಿ ಅಲೆದು ಬಂದಿದ್ದರು. ತಮ್ಮ ಬದುಕಿನ ನಿರ್ಧಾರಗಳನ್ನು ಸ್ವತಃ ಕೈಗೊಳ್ಳುವ ಈ ಯುವಕರ ಬಗ್ಗೆ ಅಭಿಮಾನ ಮೂಡಿತ್ತು.

ಈಗ ಭಾವೇಶ್ ಮತ್ತು ಗೆಳೆಯರು, ರಾಮ್ಗಡ್ವ ಹಳ್ಳಿಯನ್ನು ಹಾಯ್ದು, ರಕ್ಸೌಲ್ ಬಾರ್ಡರ್‌ನಿಂದ ಮುಂದೆ ಬಂದು ಬೀರ್ಗಂಜ್ ಮುಟ್ಟಿ, ಕೊನೆಯಲ್ಲಿ ಹೆಟೌಡಾ ಹಳ್ಳಿಯನ್ನು ತಲುಪಿದರು. ಅಲ್ಲಿ ಓರ್ವ ಸಜ್ಜನ ಬಹಳ ಉದಾರವಾಗಿ ಆ ರಾತ್ರಿ ತನ್ನ ಮನೆಯಲ್ಲಿ ಇರಲು ಅವಕಾಶ ಮಾಡಿಕೊಟ್ಟ. ಆ ದಿನಗಳಲ್ಲಿ ಎಲ್ಲಿಲ್ಲದ ಚಳಿ ಇತ್ತು. ಅವರ ಯಾತ್ರೆ ಅಕ್ಟೋಬರ್ 15ರಂದು ಆರಂಭವಾಗಿತ್ತು. ಇಂದು ಪಯಣದ ಹದಿಮೂರನೇ ದಿನ. ಇದೀಗ ಅವರು ನಿರ್ಧರಿಸಿದ್ದ ಮಾರ್ಗದ ಪ್ರಕಾರ ಕಡಿದಾದ ಘಟ್ಟ ಪ್ರದೇಶವನ್ನು ದಾಟಿ ಹೆಟೌಡಾದಿಂದ ಕಠಮಂಡು ತಲುಪಬೇಕಿತ್ತು. ತೀವ್ರ ಚಳಿಯಿದ್ದ ಕಾರಣ, ಇದು ತಮ್ಮ ಯಾತ್ರೆಯ ಅತ್ಯಂತ ಕಠಿಣ ಪರ್ವ ಎಂದು ಅವರಿಗೆ ಅರಿವಾಯಿತು. ಹೆಚ್ಚು ಏರು ಹಾದಿಯಿಲ್ಲದೆ ಇರುವ ರಸ್ತೆಯಿಂದ ಹೋಗಲು ಪ್ರಯತ್ನಿಸಿದರು. ಹೆಟೌಡಾದಿಂದ ಕಠಮಂಡುವಿನ ದೂರ ಸುಮಾರು 90 ಕಿಲೋ ಮೀಟರ್. ಒಂದು ಕಡೆ ಏರಿ ನಿಂತ ಪರ್ವತ, ನಡುವೆ ಇಕ್ಕಟ್ಟಿನ ರಸ್ತೆ. ಇನ್ನೊಂದು ಕಡೆ ಆಳವಾದ ಪ್ರಪಾತ. ಇವುಗಳ ನಡುವೆ ಜಾಗೃತವಾಗಿ ಸೈಕಲ್ ತುಳಿಯಬೇಕಿತ್ತು. ಎದುರಿನಿಂದ ಯಾವುದೇ ವಾಹನ ಕಂಡರೂ ತಕ್ಷಣ, ಪರ್ವತಕ್ಕೆ ಆತುಕೊಂಡು ನಿಂತು ಬಿಡುತ್ತಿದ್ದರು. ಆ ಗಾಡಿ ಹಾದುಹೋದ ಮೇಲೆ ಸೈಕಲ್ ತಳ್ಳುತ್ತಾ ರಸ್ತೆಗೆ ತರುವರು. ಭಾವೇಶ್ ಅವರಿಗೆ ಪರ್ವತವೂ ಕಾಣದು, ಆಳ ಕಂದರವೂ ಕಾಣದು. ಅವರಿಗೆ ಎಲ್ಲ ರಸ್ತೆಗಳೂ ಒಂದೇ ಆಗಿದ್ದವು. ಆದರೆ ದಿನೇಶ್ ವಿವರಿಸುತ್ತಿದ್ದಂತೆ ಪರಿಸ್ಥಿತಿ ಎಷ್ಟು ಗಂಭೀರವಿದೆ ಎಂದು ಅವರಿಗೆ ಅಂದಾಜಾಗಿತ್ತು. ಜೊತೆಗೆ ಘಟ್ಟದ ಏರು ಹಾದಿ, ತಮ್ಮೆಲ್ಲ ಬಲವನ್ನು ಹಾಕಿ ಪೆಡಲ್ ತುಳಿಯುವಾಗ ಅನುಭವಕ್ಕೆ ಬರುತ್ತಿತ್ತು.

ಈ ಹಾದಿಯ ಏರು ಇಳಿತಗಳ ಕಾರಣವಾಗಿ ಸೈಕಲಿನ ಬ್ರೇಕ್ ಲೈನರ್ ಎರಡು ಮೂರು ಬಾರಿ ಕೆಟ್ಟು ಕುಳಿತಿತ್ತು. ಪಟ್ನಾದ ಮ್ಯಾನೇಜರ್ ಎರಡೆರಡು ಹೆಚ್ಚಿನ ಬ್ರೇಕ್ ಲೈನರ್ ಕೊಟ್ಟದ್ದು ವರದಾನವಾಗಿತ್ತು. ಇಲ್ಲಿ ಮತ್ತೊಂದು ಅಡ್ಡಿಯೂ ಎದುರಾಗಿತ್ತು. ರಸ್ತೆ ಬಹಳ ಕೆಟ್ಟದ್ದಾಗಿತ್ತು. ಏರು ತಗ್ಗುಗಳ ಕಲ್ಲು ಹಾದಿ. ಹೀಗಾಗಿ ಬಹಳ ಬಾರಿ ಪಂಚರ್ ಆಗುತ್ತಿತ್ತು. ಅವರ ಬಳಿ ಇದ್ದ ಟ್ಯೂಬ್‌ಗಳನ್ನು ಆಗಲೇ ಉಪಯೋಗಿಸಿ ಆಗಿತ್ತು. ಪಂಚರ್ ಆಗುವುದು ನಿಲ್ಲುತ್ತಲೇ ಇರಲಿಲ್ಲ. ರೇಸರ್ ಸೈಕಲ್ ಆದ ಕಾರಣ 26 ಅಂಗುಲದ ವ್ಯಾಸವಿದ್ದ ಟ್ಯೂಬ್ ಅನ್ನು ಸೈಕಲ್‌ಗೆ ಹಾಕಲಾಗಿತ್ತು. ಹಾದಿಯಲ್ಲಿ ಸಿಗುತ್ತಿದ್ದ ಸೈಕಲ್ ಅಂಗಡಿಗಳಲ್ಲಿ ಬಹಳ ಬಾರಿ 24 ಅಂಗುಲದ ಸಾಧಾರಣ ಸೈಕಲ್‌ನ ಟ್ಯೂಬ್ ಮಾತ್ರ ಸಿಗುತ್ತಿತ್ತು. ಅದನ್ನೇ ತೆಗೆದುಕೊಂಡು, ಎಳೆದೆಳೆದು ತಮ್ಮ ಸೈಕಲ್‌ಗೆ ಕೂಡಿಸುತ್ತಿದ್ದರು.

ಆ ಸಂಜೆ, ಚಳಿ ಮತ್ತೂ ತೀವ್ರವಾಗಿ, ಹಿಮದ ಮಬ್ಬಿನಲ್ಲಿ ಹಾದಿ ಕಾಣದಾಯಿತು. ಕತ್ತಲಾಯಿತು, ಬೆಟ್ಟದ ರಸ್ತೆಯಲ್ಲಿ ಹಾದಿ ತಪ್ಪಿದರು. ಕತ್ತಲಲ್ಲಿ ಸೈಕಲ್ ತುಳಿಯುವುದೂ ಕಷ್ಟವಾಯಿತು. ತಳ್ಳಿ ಹೊರಟಂತೆ, ಎರಡೂ ಸೈಕಲ್‌ಗಳ ಡೈನಮೋದಿಂದ ಬೆಳಕು ಸಿಗುವ ಸಂಭವ ಇರಲಿಲ್ಲ. ಹಾದಿ ಕಾಣದೆ, ದಿಕ್ಕು ತೋರದೆ, ಪ್ರವೇಶಿಸಿದ್ದ ಕಾಡಿನ ಪ್ರದೇಶದಲ್ಲಿ ಒಣಗಿದ ಎಲೆಗಳ ಮೇಲೆ ನಿಧಾನವಾಗಿ ಮುಂದೆ ಸಾಗುತ್ತಿದ್ದಂತೆ, ದೂರದಲ್ಲಿ ಸಣ್ಣ ಬೆಳಕು ಕಂಡಿತು. ಹತ್ತಿರ ಬಂದಾಗ ಅದು ಫಾರೆಸ್ಟ್ ಗಾರ್ಡ್‌ನ ಡೇರೆಯಾಗಿತ್ತು.

ಚಳಿಯಿಂದ ಬಚಾವಾಗಲು ಪುರುಳೆಗಳನ್ನು ಜೋಡಿಸಿಟ್ಟ ಬೆಂಕಿ ಉರಿಯುತ್ತಿತ್ತು. ಗಾರ್ಡ್‌ಗೆ ಸಲಾಮು ಹೇಳುತ್ತ, ಆ ಚಳಿಯ ರಾತ್ರಿಯನ್ನು ಅವರ ಡೇರೆಯಲ್ಲಿ ಕಳೆಯಲು ಅನುಮತಿ ಕೇಳಿದರು. ಆತ ಒಪ್ಪಿಗೆ ನೀಡಿದ. ಇರಲೇನೋ ಒಂದಿಷ್ಟು ಜಾಗ ಸಿಕ್ಕಿತ್ತು, ಆದರೆ ಹೊಟ್ಟೆ ಹಸಿದು ಹೋಗಿತ್ತು. ಆ ದಿನ ಸೈಕಲ್ ಪಂಚರ್ ಕಾರಣದಿಂದ ಅದರ ರಿಪೇರಿಯ ಕಾರ್ಯದಲ್ಲಿ ಇಡೀ ದಿನ ಏನೂ ತಿಂದಿರಲಿಲ್ಲ. ತಿನ್ನಲು ಏನಾದರೂ ಸಿಗುವುದೇ ಎಂದು ಕೇಳಿದಾಗ, ಆ ಗಾರ್ಡ್ ಒಂದಿಷ್ಟು ಅಕ್ಕಿಯನ್ನು ಹೊರ ತೆಗೆದು 'ಈಗಷ್ಟೆ ನನ್ನ ಊಟ ಮುಗಿಸಿದೆ. ಬರೀ ಈ ಅಕ್ಕಿ ಇದೆ. ಇದನ್ನು ಬೇಯಿಸಿ ಕೊಡಲೆ?' ಎಂದು ಕೇಳಿದರು. ಜೊತೆಗೆ ಬೇಳೆಯಾಗಲಿ ತರಕಾರಿಯಾಗಲೀ ಏನೂ ಇರಲಿಲ್ಲ. ಹಸಿವಿನಿಂದ ಕಂಗಾಲಾದ ಇವರು 'ಬರೀ ಅನ್ನವನ್ನೇ ತಿಂದು ಇಂದು ಮಲಗುತ್ತೇವೆ' ಎಂದರು. ಆತ ಹೊರಗೆ ಉರಿಯುತ್ತಿದ್ದ ಸೌದೆಯ ಮೇಲೆ ಅನ್ನ ಬೇಯಿಸಲು ಇಟ್ಟ. ಅನ್ನ ಬೇಯುವಷ್ಟು ಸಮಯ ಇವರೂ ತಮ್ಮ ಪ್ರವಾಸದ ಸಾಹಸವನ್ನು ಒಂದಿಷ್ಟು ಹೆಚ್ಚೇ ಬಣ್ಣಿಸಿ ಹೇಳಿದರು.

ಬಿಸಿ ಬಿಸಿ ಅನ್ನವನ್ನು ತಟ್ಟೆಯಲ್ಲಿ ಹಾಕಿ ಕೊಟ್ಟಾಗ ಭಾವೇಶ್ 'ಒಂದಿಷ್ಟು ಉಪ್ಪು ಇದೆಯೆ?' ಕೇಳಿದರು. ಆತ ಡೇರೆಯೊಳಗಿಂದ ಒಂದು ಸಣ್ಣ ಡಬ್ಬಿಯಲ್ಲಿದ್ದ ಉಪ್ಪನ್ನು ತಂದು ಕೊಟ್ಟರು. ಹಬೆಯಾಡುತ್ತಿದ್ದ ಬಿಸಿ ಬಿಸಿ ಅನ್ನದ ಮೇಲೆ ಉಪ್ಪನ್ನು ಚಿಮುಕಿಸಿ ತಿನ್ನತೊಡಗಿದರು, ಎಂಥಾ ಅದ್ಭುತ ರುಚಿ! ನೋಡನೋಡುತ್ತಿದ್ದಂತೆ ಅಷ್ಟೂ ಅನ್ನ ಮುಗಿಸಿದ್ದರು. ಒಂದು ಅಗುಳು ಕೂಡಾ ಉಳಿದಿರಲಿಲ್ಲ.

ಭಾವೇಶ್‌ಗೆ ಜ್ಞಾನೋದಯದ ಮತ್ತೊಂದು ಕ್ಷಣವದು. ಅಂದಿನಿಂದ ಪ್ರಕೃತಿ ಯಾವಾಗ ಏನು ನೀಡುತ್ತದೋ ಅದನ್ನು ಕೃತಜ್ಞತೆಯಿಂದ ವರದಾನ ಎಂದು ಭಾವಿಸಿ ತಿನ್ನುವುದನ್ನು ಕಲಿತರು. ಬಾಲ್ಯದಲ್ಲಿ ತಮಗೆ ಇಷ್ಟವಾದ ಖಾದ್ಯವನ್ನು ಅಮ್ಮ ಮಾಡದೆ ಹೋದಾಗ ಕೋಪದಿಂದ ತಿನ್ನದೆ ಹಟ ಮಾಡುತ್ತಿದ್ದದ್ದುಂಟು. ಇಂದು ಅದನ್ನು ನೆನೆದಾಗ ಪಶ್ಚಾತ್ತಾಪವಾಯಿತು. ಆ ದಿನ ಬದುಕಿನ ಬಲು ದೊಡ್ಡ ಪಾಠವನ್ನು ಕಲಿತಿದ್ದರು: 'ನಾವು ತಿನ್ನುವುದಕ್ಕಾಗಿ ಬದುಕುವುದಲ್ಲ, ಬದುಕುವುದಕ್ಕಾಗಿ ತಿನ್ನಬೇಕು'.

ಇಂತಹ ಬಹಳಷ್ಟು ಕಠಿಣ ಸಂದರ್ಭಗಳನ್ನು ಹಾಯ್ದು ಕಡೆಗೂ ನವೆಂಬರ್ ಒಂದನೇ ತಾರೀಖು ಕಠಮಂಡು ಪ್ರವೇಶಿಸಿದರು. ಅಲ್ಲಿ ಅವರು 'ಲಯನ್ಸ್ ಕ್ಲಬ್'ನ ಅಧ್ಯಕ್ಷರೊಡನೆ ಭೇಟಿಯಾಗುವುದಿತ್ತು. ಆ ಅಧ್ಯಕ್ಷರು ನೇಪಾಳದ ಹೆಸರಾಂತ ಉದ್ಯೋಗಪತಿ ಕೂಡಾ ಆಗಿದ್ದರು. ಅವರ ಭೇಟಿಗಾಗಿ ಕಚೇರಿಯಲ್ಲಿ ಮೂರ್ನಾಲ್ಕು ಗಂಟೆ ಕಾಯಬೇಕಾಯಿತು. ಕೊನೆಗೂ ಭೇಟಿಯಾದಾಗ, ಅವರು ತಮ್ಮ ಕರ್ಮಚಾರಿಯೊಡನೆ ಈ ಮೂವರನ್ನು 'ಪಶುಪತಿ ಧರ್ಮಶಾಲೆ'ಗೆ ತಲುಪಿಸಿದರು. ಅವರು ಆ ಧರ್ಮಶಾಲೆಯ ಟ್ರಸ್ಟೀ ಆಗಿದ್ದರು. ಧರ್ಮಶಾಲೆ ಸಾಕಷ್ಟು ದೊಡ್ಡದಿತ್ತು. ಅವರ ಯೋಜನೆಯಂತೆ ಮೂರು ದಿನ ಕಠಮಂಡುವಿನಲ್ಲಿ ತಂಗುವುದಿತ್ತು. ಧರ್ಮಶಾಲೆಯಲ್ಲಿ ಅವರಿಗೆ ಒಂದು ಕೋಣೆಯನ್ನು ನೀಡಿದರು. ಅಲ್ಲಿಯೇ ಇದ್ದ ಭೋಜನಾಲಯದಲ್ಲಿ ಊಟ–ತಿಂಡಿಯ ವ್ಯವಸ್ಥೆಯನ್ನೂ ಮಾಡಿದರು. ಇರಲು ತಾಣ, ತಿನ್ನಲು ಅನ್ನ ಎಲ್ಲವೂ ದೊರೆತು ಭಾವೇಶ್ ಮತ್ತು ಗೆಳೆಯರಿಗೆ ಸಂತಸ ಮತ್ತು ಸಮಾಧಾನವಾಗಿತ್ತು. ನಿಶ್ಚಿಂತೆಯಿಂದ ಸೈಕಲ್ ತೆಗೆದುಕೊಂಡು ಕಠಮಂಡುವನ್ನು ಸುತ್ತಿ ಬರಲು ಹೊರಟರು. ಪಶುಪತಿ ಮಂದಿರ, ಪಗೌಡಾ ಈ ರೀತಿ ಬಹಳಷ್ಟು ಜಾಗಗಳಲ್ಲಿ ಅಲೆದಾಡಿ ನೇಪಾಳ ದರ್ಶನದ ಆನಂದ ಪಡೆದರು.

ಪಟ್ನಾದಲ್ಲಿ ಭೇಟಿಯಾಗಿದ್ದ ಆ ಬೈಕರ್ ತಂಡವನ್ನು ಭಾವೇಶ್ ಇಲ್ಲಿ ಭೇಟಿಯಾಗಿದ್ದರು. ನೇಪಾಳ ತಲುಪಿ, ಮರುದಿನ ಪಶುಪತಿನಾಥ ಮಂದಿರಕ್ಕೆ ಹೋಗುತ್ತಿರುವಾಗ, ಅದೇ ಬೈಕರ್ ತಂಡ ಹಾದಿಯಲ್ಲಿ ಕಂಡಿತ್ತು. ಅವರೆಲ್ಲ ಅದಾಗಲೇ ಕಠಮಂಡು ಅಲೆದು ನೋಡಿ ಯಶಸ್ವಿಯಾಗಿ ಹಿಂತಿರುಗಲು ಹೊರಟಿರಬೇಕು ಎಂದು ಭಾವೇಶ್‌ಗೆ ಅನಿಸಿತ್ತು. ಅವರು ಬೈಕ್‌ನಲ್ಲಿ ತಮ್ಮ ಹಾದಿಯಲ್ಲೇ ಮೊದಲೇ ಬಂದಿರಬೇಕು ಎಂದು ಅವರ ಅಂದಾಜು. ಆದರೆ ಅವರೊಡನೆ ಮಾತನಾಡಿದಾಗ ತಿಳಿಯಿತು, ವಾಪಾಸು ಹಿಂತಿರುಗುವುದು ದೂರದ ಮಾತು. ಅವರೆಲ್ಲರೂ ಈಗಷ್ಟೇ ಕಠಮಂಡು ತಲುಪಿದ್ದರು. ಅರೆ ಸೈಕಲ್‌ನ ವೇಗವೇನು, ಬೈಕ್‌ನ ವೇಗವೇನು? ಇವರೇಕೆ ಇಷ್ಟು ತಡವಾಗಿ ಬಂದರು? ಭಾವೇಶ್‌ಗೆ ಅಚ್ಚರಿ.

ಅವರು ಹೇಳಿದರು, ತಮ್ಮದು 52 ಮಂದಿಯ ಬಲು ದೊಡ್ಡ ಗುಂಪು. ಯಾರೂ ಯಾರ ಮಾತನ್ನೂ ಕೇಳುತ್ತಿರಲಿಲ್ಲ. ಅವರ ಮುಖಂಡನ ಯಾವ ಮಾತೂ ನಡೆಯುತ್ತಿರಲಿಲ್ಲ. ಇಬ್ಬರು ಇತ್ತ ಹೋಗುತ್ತಿದ್ದರೆ, ಮತ್ತಿಬ್ಬರು ಅತ್ತ ಹೋಗುತ್ತಿದ್ದರು.